18. ಪ್ರಾಂಶುಪಾಲರ ನಡವಳಿಕೆ

19. ಅತಿಥಿ ಉಪನ್ಯಾಸಕರ ಕರ್ತವ್ಯದ ಬಗ್ಗೆ

20. ಹಣಕಾಸಿನ ತಪಾಸಣೆ

ಈ ಮೇಲ್ಕಂಡ ವಿದ್ಯಾರ್ಥಿ/ವಿದ್ಯಾರ್ಥಿಯ ಬೇಡಿಕೆಗೆ ಅನುಗುಣವಾಗಿ ನಡಾವಳಿಯಲ್ಲಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಕೆ.ಆರ್.ಪುರ ಸರ್ಕಾರಿ ಕಾಲೇಜಿನ ಕಾಮಗಾರಿಗಳು

1430(2557), ಶ್ರೀ ಬಸವರಾಜ್ ಬಿ.ಎ.(ಕೆ.ಆರ್.ಪುರಂ)

ಅ) ಕೆ.ಆರ್.ಪುರದಲ್ಲಿರುವ ಸರ್ಕಾರಿ ಪದವಿ ಕಾಲೇಜಿನಲ್ಲಿ ತರಗತಿಗಳನ್ನು ನಡೆಸಲು ಕೊಠಡಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹೆಚ್ಚುವರಿ ಕೊಠಡಿಗಳು, ಶೌಚಾಲಯ ಹಾಗೂ ಆಡಿಟೋರಿಯಂ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಹೌದು.

ಇ) ಈ ಕಾಲೇಜಿಗೆ ₹ 50.00 ಲಕ್ಷ ವೆಚ್ಚದಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಿದ್ದು, ಇಲಾಖೆಗೆ ಹಸ್ತಾಂತರಿಸಲಾಗಿದೆ. ₹ 10.00 ಲಕ್ಷ ವೆಚ್ಚದಲ್ಲಿ ಶೌಚಾಲಯ ನಿರ್ಮಿಸಲು ಅನುಮತಿಯನ್ನು ನೀಡಲಾಗಿದ್ದು, ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ₹ 70.00 ಲಕ್ಷ ವೆಚ್ಚದಲ್ಲಿ ಸ್ನಾತಕೋತ್ತರ

ವಿಭಾಗಕ್ಕೆ ತರಗತಿ ಕೊಠಡಿಗಳನ್ನು ನಿರ್ಮಿಸಲು ಅನುಮತಿ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಆಡಿಟೋರಿಯಂ ನಿರ್ಮಾಣವನ್ನು ನಮ್ಮ ಇಲಾಖೆಯು ನಿರ್ಮಿಸುತ್ತಿಲ್ಲವಾಗಿದ್ದು, ಇದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಮಿಸಲಾಗುತ್ತಿದೆ.

ರೈಲ್ವೆ ಕಾಮಗಾರಿಗಳು

1432(2349), ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ)

ಅ) ಕೇಂದ್ರ ಸರ್ಕಾರದ ಯಾವ ಯಾವ ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರ ಭೂಮಿ ಮತ್ತು ಹಣವನ್ನು ನೀಡಿರುತ್ತದೆ; (ಸಂಪೂರ್ಣ ವಿವರ ನೀಡುವುದು)

ಆ) ಈಗಾಗಲೇ ಪ್ರಾರಂಭವಾಗಿರುವ, ಪೂರ್ಣಗೊಂಡಿರುವ ಮತ್ತು ಪ್ರಾರಂಭಿಕ ಹಂತದಲ್ಲಿ ಇರುವ ಕಾಮಗಾರಿಗಳು ಯಾವುವು? (ವಿವಿಧ ಕಾಮಗಾರಿವಾರು ಮಾಹಿತಿ ಒದಗಿಸುವುದು)

ಶ್ರೀ ಆರ್.ರೋಷನ್ ಬೇಗ್(ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು)

ಅ) **I.** ಈ ಕೆಳಕಂಡ ಯೋಜನೆಗಳಿಗೆ ಶೇ.50 ರಷ್ಟು ಯೋಜನಾ ವೆಚ್ಚವನ್ನು ಭರಿಸಲಾಗುತ್ತಿದೆ.

1. ರಾಮನಗರ – ಮೈಸೂರು (2/3 : 1/3)
2. ಹಾಸನ – ಗುಲ್ಬರ್ಗಾ
3. ಬೀದರ್ – ಗುಲ್ಬರ್ಗಾ
4. ಕೊಟ್ಟೂರು – ಹರಿಹರ
5. ಮುನಿರಾಬಾದ್ – ಮೆಹಬೂಬ್‌ನಗರ
6. ತುಮಕೂರು – ರಾಯದುರ್ಗ